2019 ಕ.ತೀ.ವ 1504

## ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ದಿನೇಶ್ ಮಹೇಶ್ವರಿ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಸುನಿಲ್ ದತ್ತ್ ಯಾದವ್

ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ –ವಿರುದ್ಧ–
ಅಧ್ಯಕ್ಷರು, ಭಾರತೀಯ ತೈಲ ಕಾರ್ಪೋರೇಷನ್ ಮತ್ತು ಇತರರು*

ಭಾರತ ಸಂವಿಧಾನದ 226 ಹಾಗೂ 227ನೇ ಅನುಚ್ಛೇದಗಳಡಿಯಲ್ಲಿನ ರಿಟ್ ಅರ್ಜಿ.

ಅರ್ಜಿದಾರ ಸಂಘಟನೆ ಒಂದು ಲಾಭದಾಯಕವಲ್ಲದ ಸಂಘಟನೆಯಾಗಿದೆ. ಈ ಸಂಘಟನೆಯೂ ಕರ್ನಾಟಕ ಸೊಸೈಟಿಗಳ ನೋಂದಣಿಗಳ ಅಧಿನಿಯಮ, 1960ರ ಅಡಿಯಲ್ಲಿ ನೋಂದಾಯಿತವಾಗಿದೆ. ಮತ್ತು ಈ ಸಂಘಟನೆಯು ವಿಶಿಷ್ಟ ವಿಕಲ ಚೇತನ ವ್ಯಕ್ತಿಗಳ ಹಕ್ಕುಗಳ ಹೋರಾಟಕ್ಕಾಗಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಪ್ರಸ್ತುತ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ಸ್ವರೂಪದ ಅರ್ಜಿಯಂತೆ ಸಲ್ಲಿಸಿದೆ (ಪಿಐಎಲ್), ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ದಿನಾಂಕ 17.08.2017ರ ಅಧಿಸೂಚನೆಯಲ್ಲಿ (ಅನುಬಂಧ–ಎ) ಮೂರು ರಾಜ್ಯ ಮಾಲೀಕತ್ವದ ಆಯಿಲ್ ಕಂಪನಿ (ಪ್ರತ್ಯರ್ಜಿದಾರ 1 ರಿಂದ 3) ಗಳು, ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ 238 ದ್ರವೀಕರಿಸಿದ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ವಿತರಕರನ್ನು ಆಯ್ಕೆ ಮಾಡುವುದಕ್ಕಾಗಿ ಅರ್ಜಿಯನ್ನು ಆಹ್ವಾನಿಸಿ ದಿನಾಂಕ 17.08.2017 ಅಧಿಸೂಚನೆ ಹೊರಡಿಸಿರುವುದನ್ನು ಪ್ರಶ್ನಿಸಿ ಪ್ರಸ್ತುತ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ದಾಖಲಿಸಲಾಗಿದೆ.

ಅರ್ಜಿದಾರರು ಈ ಸಂಬಂಧದಲ್ಲಿ ಉಲ್ಲೇಖಿಸಿದ ಕಾರಣ ಮತ್ತು ದೂರುಗಳು ಈ ಕೆಳಗಿನಂತಿದೆ:

*ರಿಟ್ ಅರ್ಜಿ ಸಂಖ್ಯೆ: 1963/2018 (ಜಿಎಮ್–ಆರ್‌ಇಎಸ್–ಪಿಐಎಲ್) , ದಿನಾಂಕ 31ನೇ ಆಗಸ್ಟ್, 2018.

ಎ) ಅಂಗವಿಕಲ ವ್ಯಕ್ತಿಗಳ ಹಕ್ಕು ಅಧಿನಿಯಮ, (2016ರ ಅಧಿನಿಯಮ) 2016ರ 37ನೇ ಪ್ರಕರಣವನ್ನು ಸಂಪೂರ್ಣವಾಗಿ ಉಲ್ಲಂಘಿಸಿದೆ, ಅಧಿನಿಯಮದ 37ನೇ ಪ್ರಕರಣದ ಅಡಿಯಲ್ಲಿ ಕಡ್ಡಾಯವಾಗಿ ಶೇ.5ರಷ್ಟು ಮೀಸಲಾತಿಯನ್ನು ಅಂಗವಿಕಲ ವ್ಯಕ್ತಿಗಳಿಗಾಗಿ ಉಪಬಂಧಿಸಿದ ಈ ಉಪಬಂಧವನ್ನು ಸಂಪೂರ್ಣವಾಗಿ ಉಲ್ಲಂಘಿಸಿದೆ. ಅರ್ಜಿದಾರರ ಪ್ರಕಾರ, 238 ಎಲ್‌ಪಿಜಿ ವಿತರಕರ ಪಟ್ಟಿಯಲ್ಲಿ ಶೇ.5 ರಷ್ಟು ಮೀಸಲಾತಿಯನ್ನು ಉಪಬಂಧಿಸಿದಾಗ, 11 ವಿತರಕರುಗಳಿಗೆ ಮೀಸಲಾತಿಯನ್ನು ಕೊಡಬೇಕಾಗುತ್ತದೆ. ಆದರೆ ಪ್ರತ್ಯರ್ಜಿದಾರರು 6 ವಿತರಕರ ಸ್ಥಾನವನ್ನು ಮಾತ್ರವೇ ಮೀಸಲಾಗಿಟ್ಟಿರುವರು. 238 ವಿತರಕರ ಪಟ್ಟಿಯಲ್ಲಿ ಶೇ.3 ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮೀಸಲಾತಿಯನ್ನು ಉಪಬಂಧಿಸಿರುವುದು ಕಂಡುಬರುತ್ತದೆ.

ಬಿ) ಎಲ್‌ಪಿಜಿ ವಿತರಕರುಗಳ ಆಯ್ಕೆಗಾಗಿ ಪ್ರತ್ಯರ್ಜಿದಾರರು ಏಕೀಕೃತ ಮಾರ್ಗಸೂಚಿಗಳನ್ನು ಹೊರಡಿಸಿರುವರು. 2016ರ ಅಧಿನಿಯಮದ 19ನೇ ಪ್ರಕರಣದ ಅಡಿಯಲ್ಲಿ ಅಂಗವಿಕಲ ವ್ಯಕ್ತಿಗಳ ಪರವಾಗಿ ಕಡ್ಡಾಯ ಹಣಕಾಸು ನೆರವುಗಳ ಉಪಬಂಧವು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟು ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಉಪಬಂಧಿಸಿದ ಉಪಬಂಧಗಳು ಈ ಅಧಿನಿಯಮಕ್ಕೂ ಅನ್ವಯವಾಗುತ್ತವೆ. ಅದರಂತೆಯೇ ಅಂಗವಿಕಲ ವ್ಯಕ್ತಿಗಳ ಪರವಾಗಿ ಅರ್ಜಿ ಶುಲ್ಕ ಮತ್ತು ಭದ್ರತಾ ಠೇವಣಿಯಲ್ಲಿ ನೀಡಬೇಕಾದ ರಿಯಾಯಿತಿಯನ್ನು ಏಕೀಕೃತ ಮಾರ್ಗಸೂಚಿಗಳಲ್ಲಿ ಪ್ರಸ್ತಾಪಿಸಿರುವುದಿಲ್ಲ.

ಈ ಅರ್ಜಿಯನ್ನು ದಾಖಲಿಸಿದಾಗ ಎಲ್‌ಪಿಜಿ ವಿತರಕಗಳ ಆಯ್ಕೆಯನ್ನು ಚೀಟಿ ಎತ್ತುವ ಮೂಲಕ ನಡೆಸಲು ದಿನಾಂಕ: 04.01.2018ರಿಂದ 18.01.2018ರ ವರೆಗೆ ವೇಳಾಪಟ್ಟಿಯನ್ನು ಸಾರ್ವಜನಿಕರ ಗಮನಕ್ಕಾಗಿ ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಿಸಿದೆ. ನೋಟೀಸಿನ ಪ್ರಕಟಣೆಯ ನಂತರ, ದಿನಾಂಕ: 09.02.2018 ರಂದು ಸಮನ್ವಯ ಪೀಠವು ಈ ಅರ್ಜಿಯನ್ನು ಪರಿಗಣಿಸಿರುವಾಗ ನಂತರದಲ್ಲಿ ಶೇ.3ರಷ್ಟು ಮೀಸಲಾತಿಯನ್ನು ಒದಗಿಸುವುದಕ್ಕಾಗಿ ಭಾರತದ ಒಕ್ಕೂಟದ ಮಾನ್ಯ ನ್ಯಾಯವಾದಿಗಳು ನಿರ್ದಿಷ್ಟ ಪ್ರತಿಕ್ರಿಯೆಯನ್ನು ಕೊಡದಿರುವುದು ಕಂಡುಬಂದ ನಂತರ ಅದರ ಆಧಾರವಾಗಿ

ಮುಂದುವರೆದ ನಡಾವಳಿಗಳ ಅನುಸಾರವಾಗಿ ಪ್ರಶ್ನಿತ ನೋಟೀಸಿನ ತಡೆಯಾಜ್ಞೆ ನೀಡಿದೆ.

ಅಂಗವಿಕಲ ವ್ಯಕ್ತಿಗಳಿಗಾಗಿ ಅಧಿನಿಯಮಿಸಲಾದ ಇತರ ಉಪಬಂಧಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಅಗತ್ಯವಿರುವ ಉನ್ನತ ನೆರವಿಗೆ ಸಂಬಂಧಿಸಿದಂತೆ ಸಮುಚಿತ ಸರ್ಕಾರದ ಕರ್ತವ್ಯಗಳನ್ನು ಮತ್ತು ಹೊಣೆಗಾರಿಕೆಗಳ ಬಗ್ಗೆ ರಚಿಸಿದೆ; ಅಂಗವಿಕಲ ವ್ಯಕ್ತಿಗಳಿಗಾಗಿ ಸಂಸ್ಥೆಗಳ ನೋಂದಣಿ ಮತ್ತು ಅಂಥ ಸಂಸ್ಥೆಗಳಿಗೆ ಅನುದಾನಗಳು; ಅಂಗವಿಕಲ ವ್ಯಕ್ತಿಗಳಿಗಾಗಿ ಕೇಂದ್ರ ಮತ್ತು ರಾಜ್ಯ ಸಲಹಾ ಮಂಡಲಿಗಳ ಆಯೋಗಗಳ ಸ್ಥಾಪನೆ, ಅಂಗವಿಕಲ ವ್ಯಕ್ತಿಗಳ ಅಪರಾಧ ಮತ್ತು ದಂಡನೆಗಾಗಿ ವಿಶೇಷ ನ್ಯಾಯಾಲಯಗಳು, ವಿಶೇಷ ಪ್ರಾಸಿಕ್ಯೂಟರ್‌ಗಳು ಮತ್ತು ರಾಜ್ಯ ನಿಧಿಗಳು; ಈ ಸಂಬಂಧದಲ್ಲಿ ಇತರ ಉಪಬಂಧಗಳನ್ನು ಅಧಿನಿಯಮಿಸಲಾಗಿದೆ.

2016ರ ಅಧಿನಿಯಮವು 37ನೇ ಪ್ರಕರಣಕ್ಕೆ ಹಿಂದುರುಗಿದಾಗ, ಅದರಲ್ಲಿ ತೀವ್ರತರ ಅಂಗವೈಕಲ್ಯತೆ ಹೊಂದಿರುವ ವ್ಯಕ್ತಿಗಳ ಪರವಾಗಿ ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಕಾರ್ಯಯೋಜನೆ ಮಾಡುವುದಕ್ಕೆ ನಿರೀಕ್ಷಿಸಿರುವುದನ್ನು ಗಮನಕ್ಕೆ ತಂದುಕೊಳ್ಳಬಹುದಾಗಿದೆ. ಈಗಾಗಲೇ ಈ ಮುಂದಿನವುಗಳಲ್ಲಿ ಮೀಸಲಾತಿಯನ್ನು ಉಪಬಂಧಿಸಿದೆ: (ಎ) ತೀವ್ರತರ ಅಂಗವೈಕಲ್ಯತೆ ಹೊಂದಿರುವ ಮಹಿಳೆಯರಿಗೆ ಯುಕ್ತ ಆಧ್ಯತೆ ಒದಗಿಸುವುದರೊಂದಿಗೆ ಕೃಷಿ ಭೂಮಿ ಮತ್ತು ಅಭಿವೃದ್ಧಿದಾಯಕ ಕಾರ್ಯಕ್ರಮಗಳನ್ನು ಹಂಚಿಕೆ ಮಾಡಲು; (ಬಿ) "ಬಡತನ ನಿರ್ಮೂಲನೆ ಮತ್ತು ಅಭಿವೃದ್ಧಿದಾಯಕ ಕಾರ್ಯಯೋಜನೆ"ಗಳಲ್ಲೂ ಸಹ ತೀವ್ರತರ ಅಂಗವೈಕಲ್ಯತೆ ಹೊಂದಿರುವ ಮಹಿಳೆಯರಿಗೆ ಆದ್ಯತೆ ಶೇ.5ರಷ್ಟು ಮೀಸಲಾತಿಯನ್ನು; ಮತ್ತು (ಸಿ) ರಿಯಾಯಿತಿ ದರದಲ್ಲಿ ಭೂಮಿಯನ್ನು, ಆ ಭೂಮಿಯಲ್ಲಿ ಮೂಲಸೌಕರ್ಯ ಆಶ್ರಯ ಸೌಲಭ್ಯಗಳನ್ನು ಉತ್ತೇಜಿಸುವುದಕ್ಕಾಗಿ, ವ್ಯಾಪಾರ, ಉದ್ಯೋಗ ಮುಂತಾದವುಗಳನ್ನು ಪ್ರಾರಂಭಿಸಲು ಬಳಕೆ ಮಾಡಬೇಕಾದ ಭೂಮಿಯ ಹಂಚಿಕೆಯಲ್ಲಿ ಶೇ.5ರಷ್ಟು ಮೀಸಲಾತಿಯನ್ನು ಒದಗಿಸಿದೆ.

ಮೇಲೆ ಹೇಳಲಾದ ವಸ್ತುವಿಷಯವನ್ನು ಅವಲೋಕಿಸಿದಾಗ, ನಮಗೆ ಪ್ರಶ್ನಿತ ಅಧಿಸೂಚನೆ ದಿನಾಂಕ: 17.08.2017ರ ಅಡಿಯಲ್ಲಿ ವಿತರಕತ್ವವನ್ನು ನೀಡುವುದಕ್ಕೆ 2016 ಅಧಿನಿಯಮದ 37ನೇ ಪ್ರಕರಣದ ಅನ್ವಯತೆ ಬಗೆಗೆ ಅರ್ಜಿದಾರರ ಪರವಾಗಿ ಮಾಡಲಾದ ನಿವೇದನೆಗಳು ಸಮರ್ಥವಾಗಿಲ್ಲ ಎಂದು ಕಂಡು ಬರುತ್ತದೆ.

ನಿವೇದನೆಗಳ ಕಾಲಾವಧಿಯಲ್ಲಿ, ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ಶೇ.5ರಷ್ಟು ಮೀಸಲಾತಿಯನ್ನು ಒದಗಿಸಿಲ್ಲವೆಂಬ ವಿಷಯಕ್ಕೆ ಸಂಬಂಧಪಟ್ಟಂತೆ, ಪ್ರತ್ಯರ್ಜಿದಾರರು ಅಂಗವಿಕಲ ವ್ಯಕ್ತಿಗಳಿಗೆ ಕೇವಲ 6 ಸ್ಥಾನಗಳು ಮಾತ್ರ ಒದಗಿಸಿರುವುದು ಕಾನೂನು ಬಾಹಿರವಾಗಿದೆ. 238 ಸ್ಥಳಗಳಲ್ಲಿ ಶೇ.3 ರಷ್ಟು ಮೀಸಲಾತಿಯನ್ನು ಲೆಕ್ಕ ಹಾಕಿದರೆ ಅದು 7 ಸ್ಥಾನಗಳನ್ನು ಮೀಸಲಾಗಿಡಬೇಕಾಗಿತ್ತು. ಆದರೆ 6 ಸ್ಥಾನಗಳು ಮಾತ್ರ ಮೀಸಲಾಗಿಟ್ಟಿರುವುದು ಪ್ರತ್ಯರ್ಜಿದಾರರ ಕಾನೂನು ಬಾಹಿರ ಕೃತ್ಯವಾಗಿದೆ ಎಂದು ನಿವೇದಿಸಿರುವರು. ಈ ಸಂಬಂಧದಲ್ಲಿ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಒಟ್ಟು 238 ವಿತರಕತ್ವದಲ್ಲಿ 31 ವಿತರಕತ್ವವನ್ನು "ದುರ್ಗಮ ಕ್ಷೇತ್ರಿಯ ವಿತರಕ" ಎಂದು ಗುರುತಿಸಲಾಗಿದೆ. ಈ 31 ಕ್ಷೇತ್ರಗಳನ್ನು ಅಂಗವಿಕಲ ವ್ಯಕ್ತಿಗಳಿಗೆ ಯುಕ್ತವಾಗಿರುವುದಿಲ್ಲ; 238 ಕ್ಷೇತ್ರಗಳಲ್ಲಿ 31 ಕ್ಷೇತ್ರಗಳನ್ನು ತೆಗೆದು ಹಾಕಿ ಉಳಿದ ಒಟ್ಟು ಕ್ಷೇತ್ರಗಳಲ್ಲಿ ಶೇ.13ರಷ್ಟು ಮೀಸಲಾತಿಯನ್ನು ಒದಗಿಸಿದಾಗ, ಅದು 6 ಕ್ಷೇತ್ರವಾಗುತ್ತದೆ. ಈ ಸಂಬಂಧದಲ್ಲಿ ನಮಗೆ ಪ್ರತ್ಯರ್ಜಿದಾರರಿಂದ ಯಾವುದೇ ದೋಷ ಅಥವಾ ಕಾನೂನುಬಾಹಿರ ಕೃತ್ಯ ಎಸಗಿರುವುದು ಕಂಡು ಬಂದಿಲ್ಲ; ಮತ್ತು ಈ ವಸ್ತುವಿಷಯದಲ್ಲಿ ಏಕೀಕೃತ ಮಾರ್ಗಸೂಚಿಯನ್ನು ಯುಕ್ತವಾಗಿ ಅನ್ವಯವಾಗುತ್ತದೆ ಎಂದು ಕಂಡು ಬರುತ್ತದೆ.

37ನೇ ಪ್ರಕರಣದ ಅನ್ವಯಕದ ಸಂಬಂಧದಲ್ಲಿ ವಾದಾಂಶವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದಿರುವಾಗಲೆ, ನಾವು ಇಲ್ಲಿ ಅರ್ಜಿದಾರರು ಅರ್ಜಿ ಶುಲ್ಕ ಮತ್ತು ಹಣಕಾಸು ನೆರವಿಗೆ ಸಂಬಂಧಪಟ್ಟಂತೆ ಕೋರಿದ ರಿಯಾಯಿತಿ ಬಗ್ಗೆ ಇತರ ಕ್ಲೇಮುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಯಾವುದೇ ಬಾಧಿತ ವ್ಯಕ್ತಿಯು ಸೂಕ್ತವಾದ ಪ್ರಾಧಿಕಾರವನ್ನು ಕೋರಲು ಅರ್ಜಿದಾರರು ಮುಕ್ತವಾಗಿರುತ್ತಾರೆ. ಹಾಗೆ ಪರಿಗಣನೆಗಾಗಿ ಅರ್ಜಿದಾರರು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಯುಕ್ತವಾದ ನಿವೇದನೆಯನ್ನು ಸಲ್ಲಿಸಿರುವುದನ್ನು ಯುಕ್ತ ಪ್ರಾಧಿಕಾರಿಗಳು ಪರಿಶೀಲಿಸಬಹುದು ಮತ್ತು ಕಾನೂನಿಗನುಸಾರವಾಗಿ ಅದರ

**ಮೇಲಿನ ನಿರ್ಣಯವನ್ನು ತೆಗೆದುಕೊಳ್ಳಲು ಮುಕ್ತವಾಗಿರುತ್ತದೆ ಎಂದು ಸ್ಪಷ್ಟವಾದ ಅಭಿಪ್ರಾಯೋಕ್ತಿಯನ್ನು ವ್ಯಕ್ತಪಡಿಸುತ್ತೇವೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾದಲ್ಲಿ***

*1. (2003) 2 ಎಸ್‌ಸಿಸಿ 673*
*ಓಂಕಾರ್ ಲಾಲ್ ಬಜಾಜ್ ಮತ್ತು ಇತರರು*
*–ವಿರುದ್ಧ– ಭಾರತ ಒಕ್ಕೂಟ ಮತ್ತು ಮತ್ತೊಬ್ಬರು (ಉಲ್ಲೇ) 5*
*2. 2014 ಎಸ್‌ಸಿಸಿ ಆನ್‌ಲೈನ್ ಪಿ ಮತ್ತು ಎಚ್ 10630*
*ಅಖಿಲ ಭಾರತ ಎಲ್‌ಪಿಜಿ ವಿತರಕರ ಒಕ್ಕೂಟ (ಪಂಜಾಬ್)*
*–ವಿರುದ್ಧ– ಭಾರತ ಒಕ್ಕೂಟ: (ಉಲ್ಲೇ) 5*

ಅರ್ಜಿದಾರರ ಪರ: ಶ್ರೀಮತಿ ಜಯ್ನ ಕೊಥಾರಿ, ವಕೀಲರು.
1, 2 ಮತ್ತು 3ನೇ ಪ್ರತ್ಯರ್ಜಿದಾರರ ಪರ: ಮೆ: ಫಾಕ್ಸ್ ಮಂಡಲ್ ಅಸೋಸಿಯೇಟ್ಸ್ ಪರವಾಗಿ ಶ್ರೀ ಕೆ.ಎಂ. ನಟರಾಜ್, ಹಿರಿಯ ವಕೀಲರು ಇವರ ಪರವಾಗಿ ಶ್ರೀ ಶರತ್ ಮುರಿಯ, ವಕೀಲರು;
4 ಮತ್ತು 5ನೇ ಪ್ರತ್ಯರ್ಜಿದಾರರ ಪರ: ಶ್ರೀ ಜಗದೀಶ್ ಜಿ. ಕುಂಬಾರ್, ಕೇಂದ್ರ ಸರ್ಕಾರದ ಸ್ಥಾಯಿ ನ್ಯಾಯವಾದಿ.

## ಆಜ್ಞೆ

**ಮುಖ್ಯ ನ್ಯಾಯಮೂರ್ತಿ ಶ್ರೀ ದಿನೇಶ್ ಮಹೇಶ್ವರಿ:**

1. ಅರ್ಜಿದಾರ ಸಂಘಟನೆ ಒಂದು ಲಾಭದಾಯಕವಲ್ಲದ ಸಂಘಟನೆಯಾಗಿದೆ. ಈ ಸಂಘಟನೆಯು ಕರ್ನಾಟಕ ಸೊಸೈಟಿಗಳ ನೋಂದಣಿಗಳ ಅಧಿನಿಯಮ,

1960ರ ಅಡಿಯಲ್ಲಿ ನೋಂದಾಯಿತವಾಗಿದೆ. ಮತ್ತು ಈ ಸಂಘಟನೆಯು ವಿಶಿಷ್ಟ ವಿಕಲ ಚೇತನ ವ್ಯಕ್ತಿಗಳ ಹಕ್ಕುಗಳ ಹೋರಾಟಕ್ಕಾಗಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಪ್ರಸ್ತುತ ಅರ್ಜಿಯನ್ನು ಸಾರ್ವಜನಿಕ ಹಿತಾಸಕ್ತಿ ಸ್ವರೂಪದ ಅರ್ಜಿಯಂತೆ ಸಲ್ಲಿಸಿದೆ (ಪಿಐಎಲ್), ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯಲ್ಲಿ ದಿನಾಂಕ 17.08.2017ರ ಅಧಿಸೂಚನೆಯಲ್ಲಿ (ಅನುಬಂಧ–ಎ) ಮೂರು ರಾಜ್ಯ ಮಾಲೀಕತ್ವದ ಆಯಿಲ್ ಕಂಪನಿ (ಪ್ರತ್ಯರ್ಜಿದಾರ 1 ರಿಂದ 3) ಗಳು, ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ 238 ದ್ರವೀಕರಿಸಿದ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ವಿತರಕರನ್ನು ಆಯ್ಕೆ ಮಾಡುವುದಕ್ಕಾಗಿ ಅರ್ಜಿಯನ್ನು ಆಹ್ವಾನಿಸಿ ದಿನಾಂಕ 17.08.2017 ಅಧಿಸೂಚನೆ ಹೊರಡಿಸಿರುವುದನ್ನು ಪ್ರಶ್ನಿಸಿ ಪ್ರಸ್ತುತ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯನ್ನು ದಾಖಲಿಸಲಾಗಿದೆ.

2. ಅರ್ಜಿದಾರರು ಈ ಸಂಬಂಧದಲ್ಲಿ ಉಲ್ಲೇಖಿಸಿದ ಕಾರಣ ಮತ್ತು ದೂರುಗಳು ಈ ಕೆಳಗಿನಂತಿದೆ:

ಎ) ಅಂಗವಿಕಲ ವ್ಯಕ್ತಿಗಳ ಹಕ್ಕು ಅಧಿನಿಯಮ, (2016ರ ಅಧಿನಿಯಮ) 2016ರ 37ನೇ ಪ್ರಕರಣವನ್ನು ಸಂಪೂರ್ಣವಾಗಿ ಉಲ್ಲಂಘಿಸಿದೆ, ಅಧಿನಿಯಮದ 37ನೇ ಪ್ರಕರಣದ ಅಡಿಯಲ್ಲಿ ಕಡ್ಡಾಯವಾಗಿ ಶೇ.5ರಷ್ಟು ಮೀಸಲಾತಿಯನ್ನು ಅಂಗವಿಕಲ ವ್ಯಕ್ತಿಗಳಿಗಾಗಿ ಉಪಬಂಧಿಸಿದ ಈ ಉಪಬಂಧವನ್ನು ಸಂಪೂರ್ಣವಾಗಿ ಉಲ್ಲಂಘಿಸಿದೆ. ಅರ್ಜಿದಾರರ ಪ್ರಕಾರ, 238 ಎಲ್‌ಪಿಜಿ ವಿತರಕರ ಪಟ್ಟಿಯಲ್ಲಿ ಶೇ.5 ರಷ್ಟು ಮೀಸಲಾತಿಯನ್ನು ಉಪಬಂಧಿಸಿದಾಗ, 11 ವಿತರಕರುಗಳಿಗೆ ಮೀಸಲಾತಿಯನ್ನು ಕೊಡಬೇಕಾಗುತ್ತದೆ. ಆದರೆ ಪ್ರತ್ಯರ್ಜಿದಾರರು 6 ವಿತರಕರ ಸ್ಥಾನವನ್ನು ಮಾತ್ರವೇ ಮೀಸಲಾಗಿಟ್ಟಿರುವರು. 238 ವಿತರಕರ ಪಟ್ಟಿಯಲ್ಲಿ ಶೇ.3 ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಮೀಸಲಾತಿಯನ್ನು ಉಪಬಂಧಿಸಿರುವುದು ಕಂಡುಬರುತ್ತದೆ.

ಬಿ) ಎಲ್‌ಪಿಜಿ ವಿತರಕರುಗಳ ಆಯ್ಕೆಗಾಗಿ ಪ್ರತ್ಯರ್ಜಿದಾರರು ಏಕೀಕೃತ ಮಾರ್ಗಸೂಚಿಗಳನ್ನು ಹೊರಡಿಸಿರುವರು. 2016ರ ಅಧಿನಿಯಮದ 19ನೇ ಪ್ರಕರಣದ ಅಡಿಯಲ್ಲಿ ಅಂಗವಿಕಲ ವ್ಯಕ್ತಿಗಳ ಪರವಾಗಿ ಕಡ್ಡಾಯ ಹಣಕಾಸು ನೆರವುಗಳ ಉಪಬಂಧವು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಬುಡಕಟ್ಟು ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಉಪಬಂಧಿಸಿದ ಉಪಬಂಧಗಳು ಈ ಅಧಿನಿಯಮಕ್ಕೂ ಅನ್ವಯವಾಗುತ್ತವೆ. ಅದರಂತೆಯೇ ಅಂಗವಿಕಲ ವ್ಯಕ್ತಿಗಳ ಪರವಾಗಿ ಅರ್ಜಿ ಶುಲ್ಕ ಮತ್ತು ಭದ್ರತಾ ಠೇವಣಿಯಲ್ಲಿ ನೀಡಬೇಕಾದ ರಿಯಾಯಿತಿಯನ್ನು ಏಕೀಕೃತ ಮಾರ್ಗಸೂಚಿಗಳಲ್ಲಿ ಪ್ರಸ್ತಾಪಿಸಿರುವುದಿಲ್ಲ.

3. ಈ ಅರ್ಜಿಯನ್ನು ದಾಖಲಿಸಿದಾಗ ಎಲ್‌ಪಿಜಿ ವಿತರಕಗಳ ಆಯ್ಕೆಯನ್ನು ಚೀಟಿ ಎತ್ತುವ ಮೂಲಕ ನಡೆಸಲು ದಿನಾಂಕ: 04.01.2018 ರಿಂದ 18.01.2018ರ ವರೆಗೆ ವೇಳಾಪಟ್ಟಿಯನ್ನು ಸಾರ್ವಜನಿಕರ ಗಮನಕ್ಕಾಗಿ ಕನ್ನಡ ದಿನಪತ್ರಿಕೆಗಳಲ್ಲಿ ಪ್ರಕಟಿಸಿದೆ. ನೋಟೀಸಿನ ಪ್ರಕಟಣೆಯ ನಂತರ, ದಿನಾಂಕ: 09.02.2018ರಂದು ಸಮನ್ವಯ ಪೀಠವು ಈ ಅರ್ಜಿಯನ್ನು ಪರಿಗಣಿಸಿರುವಾಗ ನಂತರದಲ್ಲಿ ಶೇ.3ರಷ್ಟು ಮೀಸಲಾತಿಯನ್ನು ಒದಗಿಸಿರುವ ಬಗ್ಗೆ ಭಾರತದ ಒಕ್ಕೂಟದ ಮಾನ್ಯ ನ್ಯಾಯವಾದಿಗಳು ನಿರ್ದಿಷ್ಟ ಪ್ರತಿಕ್ರಿಯೆಯನ್ನು ಕೊಡದಿರುವುದು ಕಂಡುಬಂದ ನಂತರ ಅದರ ಆಧಾರವಾಗಿ ಮುಂದುವರೆದ ನಡಾವಳಿಗಳ ಅನುಸಾರವಾಗಿ ಪ್ರಶ್ನಿತ ನೋಟೀಸಿಗೆ ತಡೆಯಾಜ್ಞೆ ನೀಡಿದೆ.

4. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು, ಎಲ್‌ಪಿಜಿ ವಿತರಕತ್ವವು ಒಂದು ಅಭಿವೃದ್ಧಿಯಾತ್ಮಕ ಕಾರ್ಯ ಯೋಜನೆಯಾಗಿದೆ ಮತ್ತು ಅದೊಂದು ಕಲ್ಯಾಣದ (ಕ್ಷೇಮಾಭಿವೃದ್ಧಿಯ) ಮಾನದಂಡವಾಗಿದೆ ಮತ್ತು ಅದು ಕೇವಲ ವಾಣಿಜ್ಯ ವಹಿವಾಟಾಗಿರುವುದಿಲ್ಲ ಎಂದು ನ್ಯಾಯವಾದಿಗಳು ವಾದವನ್ನು ಮಂಡಿಸಿರುವರು. ಹಾಗಾಗಿ, ಅಂಥ ಎಲ್‌ಪಿಜಿ ವಿತರಕತ್ವವನ್ನು ಕೊಡುವುದಕ್ಕಾಗಿ 37ನೇ ಪ್ರಕರಣದ ಉಪಬಂಧವನ್ನು ಅನ್ವಯಿಸಿಕೊಳ್ಳಬೇಕೆಂದು ವಾದಿಸಿರುವರು. ಮಾನ್ಯ ನ್ಯಾಯವಾದಿ ಅಂಥ ವಿತರಕತ್ವವು ಕ್ಷೇಮಾಭಿವೃದ್ಧಿ ಮಾನದಂಡವಾಗಿದೆ

ಎಂದು ಬಡತನ ನಿರ್ಮೂಲನಾ ಕಾರ್ಯ ಯೋಜನೆಯಾಗಿದೆ ಎಂಬುದು ಸುಸ್ಪಷ್ಟವಾಗಿದೆ. ಏಕೀಕೃತ ಮಾರ್ಗಸೂಚಿಗಳಲ್ಲಿ ಅಂಗವಿಕಲ ವ್ಯಕ್ತಿಗಳನ್ನು ಒಳಗೊಂಡಂತೆ ವಿವಿಧ ಪ್ರವರ್ಗಗಳಾಗಿ ಮೀಸಲಾತಿಯನ್ನು ಪ್ರತ್ಯರ್ಜಿದಾರರು ತಾವೇ ಒದಗಿಸಿರುವುದು ಇದಕ್ಕೆ ಸಾಕ್ಷಿಯಾಗಿದೆ ಎಂದು ತಮ್ಮ ವಾದದಲ್ಲಿ ಸ್ಪಷ್ಟವಾಗಿ ನಿವೇದಿಸಿರುವರು.

5. ಮಾನ್ಯ ನ್ಯಾಯವಾದಿಗಳು, ಘನವೆತ್ತ ಸರ್ವೋಚ್ಚ ನ್ಯಾಯಾಲಯ ***ಓಂಕಾರ್ ಲಾಲ್ ಬಜಾಜ್ ಮತ್ತು ಇತರರು –ವಿರುದ್ಧ– ಭಾರತ ಒಕ್ಕೂಟ ಮತ್ತು ಮತ್ತೊಬ್ಬರು***[1] ಮೊಕದ್ದಮೆಯಲ್ಲಿ ನೀಡಿದ ನಿರ್ಣಯ ಮತ್ತು ಸನ್ಮಾನ್ಯ ಪಂಜಾಬ್ ಮತ್ತು ಹರಿಯಾಣ ಉಚ್ಚ ನ್ಯಾಯಾಲಯವು ***ಅಖಿಲ ಭಾರತ ಎಲ್‌ಪಿಜಿ ವಿತರಕರ ಒಕ್ಕೂಟ (ಪಂಜಾಬ್) –ವಿರುದ್ಧ– ಭಾರತ ಒಕ್ಕೂಟ*** [2], ಮೊಕದ್ದಮೆಯಲ್ಲಿ ನೀಡಿದ ನಿರ್ಣಯವನ್ನು ಅವಲಂಬನೆಯಾಗಿ ನೀಡಿರುವರು.

6. ಮತ್ತೆ ಮುಂದುವರೆದು ಮಾನ್ಯ ನ್ಯಾಯವಾದಿಗಳು ಶೇ.5 ರಷ್ಟು ಮೀಸಲಾತಿಯನ್ನು 2016ರ ಅಧಿನಿಯಮದ ಅಡಿಯಲ್ಲಿ ಅಂಗವಿಕಲ ವ್ಯಕ್ತಿಗಳಾಗಿ ಇತರ ರಿಯಾಯಿತಿಯನ್ನು ಕಡ್ಡಾಯಗೊಳಿಸಿರುವುದನ್ನು ಮತ್ತು ಅಗತ್ಯಪಡಿಸಿದ ಮೀಸಲಾತಿಗಿಂತ ಕಡಿಮೆ ಪ್ರಮಾಣದ ಮೀಸಲಾತಿಯನ್ನು ಮೊಟಕುಗೊಳಿಸಿರುವುದರ ವಿರುದ್ಧ ವಾದವನ್ನು ನಿವೇದಿಸಿರುವರು. ಈ ಕಾರಣದಿಂದಲೇ ಮಾನ್ಯ ನ್ಯಾಯವಾದಿಗಳು ಮೊಕದ್ದಮೆಯ ಅರ್ಜಿಯನ್ನು ಪುರಸ್ಕರಿಸಬೇಕೆಂದು, ಅರ್ಹ ಅಭ್ಯರ್ಥಿಗಳಿಗೆ ಇದರಿಂದ ಯಾವುದೇ ತೊಂದರೆ ಉಂಟಾಗುವುದಿಲ್ಲವೆಂದು ಹಾಗೂ ಅಂಗವಿಕಲ ವ್ಯಕ್ತಿಗಳಿಗೆ ನ್ಯಾಯ ಒದಗಿಸುವ ಏಕಮಾತ್ರ ಉದ್ದೇಶದಿಂದ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಬೇಕೆಂದು ತಮ್ಮ ವಾದಾಂಶದಲ್ಲಿ ನಿವೇದಿಸಿರುವರು.

1. (2003) 2 ಎಸ್‌ಸಿಆರ್ 673 2. 2014 ಎಸ್‌ಸಿಸಿ ಅನ್‌ಲೈನ್ ಪಿ ಮತ್ತು ಎಚ್ 10630

7. ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಪ್ರಶ್ನಿತ ಅಧಿಸೂಚನೆಯಲ್ಲಿ ಅಂಗವಿಕಲ ವ್ಯಕ್ತಿಗಳಿಗಾಗಿ ಶೇ.5ರಷ್ಟು ಮೀಸಲಾತಿಯನ್ನು ಒದಗಿಸದಿರುವುದರಿಂದ ಪ್ರಶ್ನಿತ ಅಧಿಸೂಚನೆಯೂ ವಜಾಗೊಳ್ಳಲು ಅರ್ಹವಾಗಿದೆ ಮತ್ತು ಅಂಥ ಮೀಸಲಾತಿಯು ಸರಿಯಾದ ಪ್ರಮಾಣದಲ್ಲಿ ಇರುವುದನ್ನು ದೃಢಪಡಿಸಿಕೊಂಡು ಪರಿಷ್ಕೃತ ಅಧಿಸೂಚನೆಯನ್ನು ಹೊರಡಿಸಬೇಕೆಂದು ಮತ್ತು ಮಾರ್ಗಸೂಚಿಯಲ್ಲಿ ಬಿಟ್ಟುಹೋಗಿರುವ ಅಂಗವಿಕಲ ವ್ಯಕ್ತಿಗಳಿಗೆ ಇರುವ ಇತರ ರಿಯಾಯಿತಿಗಳೊಂದಿಗೆ ಮತ್ತು ಅಂಗವಿಕಲ ವ್ಯಕಿಗಳಿಗಾಗಿ ವಯಸ್ಸು, ಭದ್ರತಾ ಠೇವಣಿ, ಅರ್ಜಿ ಶುಲ್ಕ, ಆರ್ಥಿಕ ನೆರವು ಮತ್ತು ಸಾಲಗಳಂತಹ ರಿಯಾಯಿತಿಗಳನ್ನು ಒಳಗೊಂಡಂತೆ ಮಾರ್ಗಸೂಚಿಗಳನ್ನು ಪರಿಷ್ಕರಿಸಬೇಕೆಂದು ಸಮರ್ಥವಾಗಿ ವಾದವನ್ನು ನಿವೇದಿಸಿರುವರು.

8. ವಿರುದ್ಧವಾಗಿ, ಪ್ರತ್ಯರ್ಜಿದಾರರು 1 ರಿಂದ 3ರ ಇವರ ಪರವಾಗಿ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು 2016ರ ಅಧಿನಿಯಮದ ಅದರಲ್ಲೂ ಆ ಅಧಿನಿಯಮದ ನಿರ್ದಿಷ್ಟ ಪ್ರಕರಣಗಳಾದ 19, 34 ಮತ್ತು 37ನೇ ಪ್ರಕರಣಗಳು ಆಯಿಲ್ ಕಂಪನಿಗಳೂ ದಿನಾಂಕ: 17.08.2017ರಂದು ಆರಂಭಿಸಿದ ಜಂಟಿ ಸಾರ್ವಜನಿಕ ಜಾಹೀರಾತಿಗೆ ಇದು ಅನ್ವಯವಾಗುವುದಿಲ್ಲವೆಂದು, ಸಾಧ್ಯವಾದಷ್ಟು ಎಲ್‌ಪಿಜಿ ವಿತರಕತ್ವ ವ್ಯವಹಾರವು ಖಾತರಿ ಲಾಭಾಂಶವನ್ನು ಹೊಂದಿರುವುದಿಲ್ಲ ಅದು ಹಾನಿ ಸಂಭವಿಸುವ  ಸಂಭಾವ್ಯತೆಯನ್ನು ಒಳಗೊಳ್ಳುವ ಸಾಮಾನ್ಯ ವ್ಯವಹಾರವಾಗಿದೆ ಎಂದು ವಾದಿಸಿರುವರು. ಆದುದರಿಂದ, ಪ್ರಸ್ತುತ ಮೊಕದ್ದಮೆಗೆ ಅಧಿನಿಯಮದ 37ನೇ ಪ್ರಕರಣದ (ಬಿ) ಖಂಡದಲ್ಲಿ ರೂಪಿಸಲಾಗಿರುವ ಬಡತನ ನಿರ್ಮೂಲನೆ ಮತ್ತು ವಿವಿಧ ಅಭಿವೃದ್ಧಿ ಕಾರ್ಯಯೋಜನೆಗೆ–ಇದು ಅನ್ವಯವಾಗುವುದಿಲ್ಲ. ಜಾಹೀರಾತಿನ 5ನೇ ಅಂಶದ (5)ನೇ ಉಪ–ಖಂಡದಲ್ಲಿ ಇದೊಂದು ವ್ಯಾಪಾರದ ಪ್ರಸ್ತಾವನೆಯಾಗಿದೆಯೇ ಹೊರತು ಉದ್ಯೋಗದ ಅರ್ಜಿಯಾಗಿರುವುದಿಲ್ಲ ಮತ್ತು ಇದೊಂದು ಒಪ್ಪಂದ ಸ್ವರೂಪದಲ್ಲಿರುತ್ತದೆ. ಇದನ್ನು "ಬಡತನ ನಿರ್ಮೂಲನಾ ಕಾರ್ಯ ಯೋಜನೆ"ಯಂತೆ ರೂಪಿತವಾಗಿಲ್ಲವೆಂದು ವಾದಾಂಶದಲ್ಲಿ ನಿವೇದಿಸಿರುವರು.

9. ಪ್ರಶ್ನಿತ ಜಾಹೀರಾತಿಗೆ ಸಂಬಂಧಿಸಿದಂತೆ ಮಾನ್ಯ ಹಿರಿಯ ನ್ಯಾಯವಾದಿಗಳು ಅಂಗವಿಕಲ ವ್ಯಕ್ತಿಗಳಿಗಾಗಿ ಒಟ್ಟು 6 ಸ್ಥಳಗಳನ್ನು ಸರಿಯಾಗಿ ಮೀಸಲುಗೊಳಿಸಲಾಗಿದೆ. ಈಗ ಯಾವುದೇ ಹೆಚ್ಚುವರಿ ಮೀಸಲಾತಿಯನ್ನು ಮಾಡಿದರೆ, ಎಲ್‌ಪಿಜಿ ವಿತರಕರುಗಳ ನೇಮಕದ ಇಡೀ ಪ್ರಕ್ರಿಯೆಯೂ ಸ್ಥಗಿತಗೊಳ್ಳುತ್ತದೆ. ಇದರಿಂದ ತೈಲ ಕಂಪನಿಗಳು ಭರಿಸಲಾಗದ ನಷ್ಟಕ್ಕೆ ಈಡಾಗುತ್ತವೆಯೆಂದು ನಿವೇದಿಸಿದ್ದಾರೆ.

10. ಪಕ್ಷಕಾರರ ಮಾನ್ಯ ವಕೀಲರ ಅಹವಾಲನ್ನು ಆಲಿಸಲಾಗಿದೆ ಮತ್ತು ಅನ್ವಯವಾಗಬಹುದಾದ ಕಾನೂನುಗಳನ್ನು ಉಲ್ಲೇಖಿಸುವುದರೊಂದಿಗೆ ಅಭಿಲೇಖಿಸಿದ ವಸ್ತು ವಿಷಯವನ್ನು ಅವಲೋಕಿಸಲಾಗಿದೆ. ದಿನಾಂಕ: 17.08.2017 ಅಧಿಸೂಚನೆಯ ಅಡಿಯಲ್ಲಿ ಎಲ್‌ಪಿಜಿ ವಿತರಕತ್ವಗಳ ಹಂಚಿಕೆಗೆ ನೇರವಾಗಿ 2016ರ ಅಧಿನಿಯಮದ 37ನೇ ಪ್ರಕರಣದ ಅನ್ವಯ ಸಾಧ್ಯತೆಯ ಕುರಿತ ನಿವೇದನೆಗಳನ್ನು ಒಪ್ಪಿಕೊಳ್ಳುವುದಕ್ಕೆ ನಮಗೆ ಒಮ್ಮತವಿಲ್ಲ ಮತ್ತು ಶೇ.3 ರಷ್ಟು ವಿತರಕತ್ವದ ಅಂಥ ಹಂಚಿಕೆಯಲ್ಲಿ ಮೀಸಲಾತಿಗಾಗಿ ಉಪಬಂಧಿಸಿರುವುದು ದೋಷಪೂರ್ಣವಾಗಿರುವುದಿಲ್ಲ. ಆದರೆ ಅರ್ಜಿದಾರರ ಪರವಾಗಿ ಮಾಡಿದ ಇತರ ನಿವೇದನೆಗಳಿಗೆ ಸಂಬಂಧಿಸಿದಂತೆ ವಿಕಲಚೇತನ ವ್ಯಕ್ತಿಗಳಿಗೆ ಇತರ ಅನುಕೂಲತೆಗಳಂತೆ ಸಾಲ/ರಿಯಾಯಿತಿ ಶುಲ್ಕಗಳನ್ನು ಒದಗಿಸುವುದಕ್ಕಾಗಿ ಸಮುಚಿತ ಸರ್ಕಾರವು ತೆಗೆದುಕೊಳ್ಳಬೇಕಾದ ಕ್ರಮವಾಗಿರುತ್ತದೆ. ಈ ಕುಂದುಕೊರತೆಗಳನ್ನು ನಿವಾರಿಸುವುದಕ್ಕಾಗಿ ಈ ಸಂಬಂಧದಲ್ಲಿ ಸೂಕ್ತವಾಗಿ ಮಾಡಿದ ಸಮುಚಿತ ನಿವೇದನೆಗಳೇನಾದರೂ ಇದ್ದರೆ ಅವುಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದಕ್ಕೆ ಪ್ರತ್ಯರ್ಜಿದಾರರು ಮುಕ್ತವಾಗಿರುತ್ತಾರೆ.

11. ಈ ಸಂಬಂಧದಲ್ಲಿ, ಅರ್ಜಿದಾರರು 2016ರ ಅಧಿನಿಯಮದ 37ನೇ ಪ್ರಕರಣದ ಅಡಿಯಲ್ಲಿ ಉಪಬಂಧಿಸಿದಂತೆ ಎಲ್‌ಪಿಜಿ ವಿತರಕತ್ವದ ಹಂಚಿಕೆಯಲ್ಲಿ ಶೇ.5ರಷ್ಟು ಮೀಸಲಾತಿಯನ್ನು ಒದಗಿಸಲೇಬೇಕೆಂದು ಕ್ಲೇಮು ಮಾಡಿರುವರು. ಈ ವಾದಾಂಶವನ್ನು 2016ರ ಅಧಿನಿಯಮದ 37ನೇ ಪ್ರಕರಣದ ಉಪಬಂಧ ಮತ್ತು

ಕಾರ್ಯಯೋಜನೆಯನ್ನು ಸ್ಪಷ್ಟವಾಗಿ ಪರಾಮರ್ಶಿಸಿದಾಗ ಈ ವಾದಾಂಶವನ್ನು ಸ್ವೀಕರಿಸುವುದಕ್ಕೆ ಅದು ಯಾವುವೇ ಗುಣಾರ್ಹತೆಯನ್ನು ಹೊಂದಿಲ್ಲ.

12. ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಮೇಲೆ ವಿಶ್ವ ಸಂಸ್ಥೆಯ ಸಮಾವೇಶದ ಪರಾಮರ್ಶೆಯಲ್ಲಿ ಅಂಗವಿಕಲ ವ್ಯಕ್ತಿಗಳ (ಸಮಾನ ಅವಕಾಶ, ಹಕ್ಕುಗಳ ಸಂರಕ್ಷಣೆಗೆ ಮತ್ತು ಪೂರ್ಣ ಭಾಗವಹಿಸುವಿಕೆ) ಅಧಿನಿಯಮ, 1995 ಅನ್ನು ಬದಲಿಯಾಗಿ ಭವಿಷ್ಯವರ್ತಿಯಾಗಿ ಅಂಗವಿಕಲ ವ್ಯಕ್ತಿಗಳ ಸಶಕ್ತೀಕರಣಕ್ಕಾಗಿ 2016ರ ಅಧಿನಿಯಮವನ್ನು ಪ್ರತ್ಯಾಯೋಜಿಸಿ ಅಧಿನಿಯಮಿಸಲಾಗಿದೆ.

13. 2016ರ ಅಧಿನಿಯಮದ IIನೇ ಅಧ್ಯಾಯದಲ್ಲಿ ಸಮಾನತೆ ಮತ್ತು ನಿಷ್ಪಕ್ಷಪಾತ ಹಕ್ಕುಗಳು; ಸಮುದಾಯ ಬದುಕು; ಕ್ರೌರ್ಯ, ದೌರ್ಜನ್ಯ, ಹಿಂಸೆ ಮತ್ತು ಶೋಷಣೆಯಿಂದ ಸಂರಕ್ಷಣೆ; ಸುರಕ್ಷತೆ; ಗಮ್ಯತೆ ಮತ್ತು ಪೋಷಕತ್ವವನ್ನು ಉಪಬಂಧಿಸಿದೆ. IIIನೇ ಅಧ್ಯಾಯದಲ್ಲಿ, ಅಂಗವಿಕಲ ವ್ಯಕ್ತಿಗಳ ಶಿಕ್ಷಣದ ಸಂಬಂಧದಲ್ಲಿ ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ತೆಗೆದುಕೊಳ್ಳಬೇಕಾದ ಕ್ರಮಗಳ ಉಪಬಂಧವನ್ನು ಉಪಬಂಧಿಸಿದೆ. IVನೇ ಅಧ್ಯಾಯದಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ಉಪಬಂಧಿಸಿದೆ ಮತ್ತು Vನೇ ಅಧ್ಯಾಯದಲ್ಲಿ ಸಾಮಾಜಿಕ ಭದ್ರತೆ; ಆರೋಗ್ಯ ಪಾಲನೆ; ಪುನರ್ವಸತಿ ಮತ್ತು ಮನೋರಂಜನೆ, ಇತ್ಯಾದಿಗಳನ್ನು ಉಪಬಂಧಿಸಿದೆ.

14. ನಂತರದಲ್ಲಿ, ಅಧಿನಿಯಮಿಸಲಾದ VIನೇ ಅಧ್ಯಾಯದಲ್ಲಿ ತೀವ್ರತರ ಅಂಗವೈಕಲ್ಯತೆ ಹೊಂದಿರುವ ವ್ಯಕ್ತಿಗಳಿಗಾಗಿ ವಿಶೇಷ ಉಪಬಂಧವನ್ನು ಮಾಡಿದೆ. ಅಂಥ ವ್ಯಕ್ತಿಗಳಿಗಾಗಿ, ಅಧಿನಿಯಮದ 31ರಿಂದ 34ನೇ ಪ್ರಕರಣದ ಅಡಿಯಲ್ಲಿ ಉಚಿತ ಶಿಕ್ಷಣ; ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ಮೀಸಲಾತಿ ಮತ್ತು ಉದ್ಯೋಗದಲ್ಲಿ ಮೀಸಲಾತಿಯನ್ನು ಉಪಬಂಧಿಸಿದೆ. 35ನೇ ಪ್ರಕರಣದ ಅಡಿಯಲ್ಲಿ ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ತಮ್ಮ ಅಧಿಕಾರ ವ್ಯಾಪ್ತಿಯೊಳಗೆ

ತೀವ್ರತರ ಅಂಗವೈಕಲ್ಯತೆ ಹೊಂದಿರುವ ವ್ಯಕ್ತಿಗಳ ಅವರ ಆರ್ಥಿಕ ಸಾಮಾನ್ಯ ಮತ್ತು ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಅವರಿಗೆ ಖಾಸಗೀ ವಲಯದ ಉದ್ಯೋಗದಲ್ಲಿ ಶೇ.5ರಷ್ಟನ್ನು ಮೀಸಲುಗೊಳಿಸಲು ಸುನಿಶ್ಚಿತಗೊಳಿಸಲು ಉಪಬಂಧವನ್ನು ಉಪಬಂಧಿಸಿದೆ. 36ನೇ ಪ್ರಕರಣದಲ್ಲಿ, ತೀವ್ರತರ ಅಂಗವೈಕಲ್ಯತೆ ಹೊಂದಿರುವ ವ್ಯಕ್ತಿಗಳ ನೇಮಕ ಮಾಡುವ ಖಾಲಿಸ್ಥಾನಗಳ ಸಂಬಂಧದಲ್ಲಿ ಮಾಹಿತಿಯನ್ನು ಸಿದ್ಧಪಡಿಸುವುದಕ್ಕೆ ಅಗತ್ಯವಾದ ವಿಶೇಷ ಉದ್ಯೋಗ ವಿನಿಮಯ ಕೇಂದ್ರವನ್ನು ಮತ್ತು ಪ್ರತಿಯೊಂದು ಸಂಸ್ಥೆಯ, ಉದ್ಯೋಗದಾತನನ್ನು ಅಗತ್ಯಪಡಿಸಿ ಅಧಿಸೂಚಿಸುವುದಕ್ಕಾಗಿ ಉಪಬಂಧಗಳನ್ನು ರಚಿಸಲಾಗಿದೆ.

15. ನಂತರದಲ್ಲಿ, 37ನೇ ಪ್ರಕರಣದಲ್ಲಿ ವಿಶೇಷ ಕಾರ್ಯ ಯೋಜನೆಗಳ ಮತ್ತು ಅಭಿವೃದ್ಧಿಯಾತ್ಮಕ ಕಾರ್ಯಕ್ರಮಗಳ ಸಂಬಂಧದಲ್ಲಿ ಉಪಬಂಧಗಳನ್ನು ರಚಿಸಲಾಗಿದೆ, ಪ್ರಸ್ತುತ ಮೊಕದ್ದಮೆಯಲ್ಲಿ ಒತ್ತಿ ಹೇಳಲಾದ ಪ್ರಕರಣವು ಈ ಕೆಳಗಿನಂತಿದೆ:

> "***37. ವಿಶೇಷ ಕಾರ್ಯಯೋಜನೆಗಳು ಮತ್ತು ಅಭಿವೃದ್ಧಿಯಾತ್ಮಕ ಕಾರ್ಯಕ್ರಮಗಳು.***– *ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು, ಗುರುತರ ಅಂಗವಿಕಲತೆ ಹೊಂದಿರುವ ವ್ಯಕ್ತಿಗಳ ಪರವಾಗಿ ಮಾಡಿದ ಕಾರ್ಯಯೋಜನೆಗಳನ್ನು ಅಧಿಸೂಚನೆಯ ಮೂಲಕ ಉಪಬಂಧಿಸಿದೆ.–*
>
> *(ಎ) ಗುರುತರ ಅಂಗವಿಕಲತೆ ಹೊಂದಿರುವ ಮಹಿಳೆಯರಿಗೆ ಸಮುಚಿತ ಆದ್ಯತೆಯೊಂದಿಗೆ ಸಂಬಂಧಪಟ್ಟ ಕೃಷಿ ಭೂಮಿ ಮತ್ತು ವಸತಿಯ ಹಂಚಿಕೆಯಲ್ಲಿ ಎಲ್ಲ ಕಾರ್ಯಯೋಜನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಗುರುತರ ಅಂಗವಿಕಲತೆ ಹೊಂದಿರುವ ಮಹಿಳೆಯರಿಗೆ ಶೇಕಡ ಐದರಷ್ಟು ಮೀಸಲಾತಿ;*

*(ಬಿ) ಬಡತನ ನಿರ್ಮೂಲನದ ಎಲ್ಲಾ ಮತ್ತು ವಿವಿಧ ಅಭಿವೃದ್ಧಿದಾಯಕ ಯೋಜನೆಗಳಲ್ಲಿ ಗುರುತರ ಅಂಗವಿಕಲತೆ ಹೊಂದಿರುವ ಮಹಿಳೆಯರಿಗೆ ಆದ್ಯತೆಯೊಂದಿಗೆ ಶೇಕಡ ಐದರಷ್ಟು ಮೀಸಲಾತಿ;*

*(ಸಿ) ವಸತಿ, ಆಶ್ರಯ, ಉತ್ತೇಜಿಸುವುದಕ್ಕಾಗಿ ಉದ್ಯೋಗ, ವ್ಯಾಪಾರ ವ್ಯವಹಾರ, ಉದ್ಯಮ, ಮನರಂಜನೆ ಕೇಂದ್ರ ಮತ್ತು ಉತ್ಪಾದನಾ ಕೇಂದ್ರಗಳನ್ನು ಸ್ಥಾಪಿಸುವುದಕ್ಕಾಗಿ, ಅಂಥ ಭೂಮಿಯನ್ನು ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲು ಶೇಕಡ ಐದರಷ್ಟು ಮೀಸಲಾತಿ".*

16. ಅಂಗವಿಕಲ ವ್ಯಕ್ತಿಗಳಿಗಾಗಿ ಅಧಿನಿಯಮಿಸಲಾದ ಇತರ ಉಪಬಂಧಗಳಲ್ಲಿ ಅಂಗವಿಕಲ ವ್ಯಕ್ತಿಗಳಿಗೆ ಅಗತ್ಯವಿರುವ ಉನ್ನತ ನೆರವಿಗೆ ಸಂಬಂಧಿಸಿದಂತೆ ಸಮುಚಿತ ಸರ್ಕಾರದ ಕರ್ತವ್ಯಗಳನ್ನು ಮತ್ತು ಹೊಣೆಗಾರಿಕೆಗಳ ಬಗ್ಗೆ ರಚಿಸಿದೆ; ಅಂಗವಿಕಲ ವ್ಯಕ್ತಿಗಳಿಗಾಗಿ ಸಂಸ್ಥೆಗಳ ನೋಂದಣಿ ಮತ್ತು ಅಂಥ ಸಂಸ್ಥೆಗಳಿಗೆ ಅನುದಾನಗಳು; ಅಂಗವಿಕಲ ವ್ಯಕ್ತಿಗಳಿಗಾಗಿ ಕೇಂದ್ರ ಮತ್ತು ರಾಜ್ಯ ಸಲಹಾ ಮಂಡಲಿಗಳ ಆಯೋಗಗಳ ಸ್ಥಾಪನೆ, ಅಂಗವಿಕಲ ವ್ಯಕ್ತಿಗಳ ಅಪರಾಧ ಮತ್ತು ದಂಡನೆಗಾಗಿ ವಿಶೇಷ ನ್ಯಾಯಾಲಯಗಳು, ವಿಶೇಷ ಪ್ರಾಸಿಕ್ಯೂಟರ್‌ಗಳು ಮತ್ತು ರಾಜ್ಯ ನಿಧಿಗಳು; ಈ ಸಂಬಂಧದಲ್ಲಿ ಇತರ ಉಪಬಂಧಗಳನ್ನು ಅಧಿನಿಯಮಿಸಲಾಗಿದೆ.

17. 2016ರ ಅಧಿನಿಯಮವು 37ನೇ ಪ್ರಕರಣಕ್ಕೆ ಹಿಂದಿರುಗಿದಾಗ, ಅದರಲ್ಲಿ ತೀವ್ರತರ ಅಂಗವೈಕಲ್ಯತೆ ಹೊಂದಿರುವ ವ್ಯಕ್ತಿಗಳ ಪರವಾಗಿ ಸಮುಚಿತ ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರಗಳು ಕಾರ್ಯಯೋಜನೆ ಮಾಡುವುದಕ್ಕೆ ನಿರೀಕ್ಷಿಸಿರುವುದನ್ನು ಗಮನಕ್ಕೆ ತಂದುಕೊಳ್ಳಬಹುದಾಗಿದೆ. ಈಗಾಗಲೇ ಈ ಮುಂದಿನವುಗಳಲ್ಲಿ ಮೀಸಲಾತಿಯನ್ನು ಉಪಬಂಧಿಸಿದೆ: (ಎ) ತೀವ್ರತರ ಅಂಗವೈಕಲ್ಯತೆ ಹೊಂದಿರುವ

ಮಹಿಳೆಯರಿಗೆ ಯುಕ್ತ ಆಧ್ಯತೆ ಒದಗಿಸುವುದರೊಂದಿಗೆ ಕೃಷಿ ಭೂಮಿ ಮತ್ತು ಅಭಿವೃದ್ಧಿದಾಯಕ ಕಾರ್ಯಕ್ರಮಗಳನ್ನು ಹಂಚಿಕೆ ಮಾಡಲು; (ಬಿ) ‘‘ಬಡತನ ನಿರ್ಮೂಲನೆ ಮತ್ತು ಅಭಿವೃದ್ಧಿದಾಯಕ ಕಾರ್ಯಯೋಜನೆ’’ಗಳಲ್ಲೂ ಸಹ ತೀವ್ರತರ ಅಂಗವೈಕಲ್ಯತೆ ಹೊಂದಿರುವ ಮಹಿಳೆಯರಿಗೆ ಆದ್ಯತೆ ಶೇ.5ರಷ್ಟು ಮೀಸಲಾತಿಯನ್ನು; ಮತ್ತು (ಸಿ) ರಿಯಾಯಿತಿ ದರದಲ್ಲಿ ಭೂಮಿಯನ್ನು, ಆ ಭೂಮಿಯಲ್ಲಿ ಮೂಲಸೌಕರ್ಯ ಆಶ್ರಯ ಸೌಲಭ್ಯಗಳನ್ನು ಉತ್ತೇಜಿಸುವುದಕ್ಕಾಗಿ, ವ್ಯಾಪಾರ, ಉದ್ಯೋಗ ಮುಂತಾದವುಗಳನ್ನು ಪ್ರಾರಂಭಿಸಲು ಬಳಕೆ ಮಾಡಬೇಕಾದ ಭೂಮಿಯ ಹಂಚಿಕೆಯಲ್ಲಿ ಶೇ.5ರಷ್ಟು ಮೀಸಲಾತಿಯನ್ನು ಒದಗಿಸಿದೆ.

18. 2016ರ ಅಧಿನಿಯುಮದ 37ನೇ ಪ್ರಕರಣವನ್ನು ಹಲವಾರು ಆಯಾಮಗಳೊಳಗೆ ಈ ಅರ್ಜಿಯಲ್ಲಿ ಕ್ಲೇಮನ್ನು ಮಾಡುವ ಸಲುವಾಗಿ ಮತ್ತು ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಎಲ್‌ಪಿಜಿ ವಿತರಕದಾರಣೆಯು ಸಂಪೂರ್ಣವಾಗಿ ವಾಣಿಜ್ಯ ವ್ಯವಹರಣೆಗಳಾಗಿರುವುದಿಲ್ಲ, ಆದರೆ ಅದು ಅಭಿವೃದ್ಧಿ ಯೋಜನೆ ಮತ್ತು ಕ್ಷೇಮಾಭಿವೃದ್ಧಿ ಕ್ರಮಗಳಾಗಿರುತ್ತವೆ ಎಂಬುದನ್ನು ಪಟ್ಟು ಬಿಡದೆ ವಾದಿಸಿರುವರು. ಈ ಸಂಬಂಧದಲ್ಲಿ, ಉಲ್ಲೇಖಿಸಲಾದ ***ಓಂಕಾರ್ ಲಾಲ್ ಬಜಾಜ್*** (ಮೇಲಿನ) ಮೊಕದ್ದಮೆಯಲ್ಲಿ ವ್ಯಕ್ತವಾದ ಅಭಿಪ್ರಾಯೋಕ್ತಿಗಳು ಮುಂದಿನಂತಿದೆ:

> *‘‘45. . . . . . . ಮೇಲ್ನೋಟಕ್ಕೆ ಮಾರ್ಗಸೂಚಿಗಳಲ್ಲಿ, ಡೀಲರ್‌ಶಿಪ್ ಮತ್ತು ವಿತರಕತ್ವದ ಹಂಚಿಕೆಗಳಲ್ಲಿ ಕ್ಷೇಮಾಭಿವೃದ್ಧಿ ಕ್ರಮಗಳಂತೆಯೇ ಉಪಬಂಧಿಸಿರುವುದು ಕಂಡು ಬರುತ್ತದೆ. ಡೀಲರ್‌ಶಿಪ್ ಆಯ್ಕೆ ಮಂಡಳಿಯು ಮುಕ್ತ ಪ್ರವರ್ಗದ ಸಂಬಂಧದಲ್ಲಿ ಅರ್ಜಿದಾರರ ವಾರ್ಷಿಕ ಆದಾಯದ ಪರಿಮಿತಿಯು 2 ಲಕ್ಷ ರೂಪಾಯಿಗಳನ್ನು ಮೀರದ ವಾರ್ಷಿಕ ಆದಾಯ ಹೊಂದಿರುವ ಅರ್ಜಿದಾರರು ಅರ್ಹರಾಗಿರುವುದನ್ನು ಪರಿಗಣಿಸಬೇಕಾಗಿದೆ. ಡೀಲರ್‌ಶಿಪ್ ಆಯ್ಕೆ ಮಂಡಳಿಯು,*

*ಮಾರ್ಗಸೂಚಿಗಳ ಮಾನದಂಡಗಳೊಳಗೆ ಮತ್ತು ಅತ್ಯುತ್ತಮ ಅರ್ಜಿದಾರರ ಆಯ್ಕೆಗಾಗಿ ಅರ್ಜಿಗಳನ್ನು ಪರಿಗಣಿಸುವುದಕ್ಕೆ ಅಗತ್ಯಪಡಿಸಿದೆ. ಡೀಲರ್‌ಶಿಪ್ ಆಯ್ಕೆ ಮಂಡಳಿಯು ಅರ್ಜಿದಾರನು ಹೊಂದಿರುವ ರಾಜಕೀಯ ನಂಟು/ಶಿಫಾರಸ್ಸು ಮತ್ತು ಸ್ಥಾನಮಾನದ ಪರಿಣಾಮವಾಗಿ ಕೆಲವೊಂದು ಸಂದರ್ಭಗಳಲ್ಲಿ ಗುಣಾರ್ಹತೆ ಹೊಂದಿಲ್ಲದಿರುವ ಅರ್ಜಿದಾರನನ್ನು ಆಯ್ಕೆ ಮಾಡಬೇಕಾಗಿರುತ್ತದೆ. ಅಂಥ ಸಂದರ್ಭದಲ್ಲಿ ನಿಸ್ಸಂಶಯುವಾಗಿ ಅಂಥ ಹಂಚಿಕೆ ವಜಾಗೊಳ್ಳಲು ಅರ್ಹವಾಗಿರುತ್ತವೆ. ಸಾಮಾನ್ಯ ವ್ಯಾಜ್ಯ ಮೊಕದ್ದಮೆಯಲ್ಲಿ, ಈ ನ್ಯಾಯಾಲಯ, ಮಂತ್ರಿಗಳ ಗಂಡು ಮಕ್ಕಳಿಗೆ ಹಂಚಿಕೆ ಮಾಡಿರುವ ನಿರ್ಣಯದ ವಾಸ್ತವಾಂಶಗಳನ್ನು ವಿಚಾರಣೆ ಮಾಡಿದ ಮೇಲೆ ಮಂತ್ರಿಗಳಾಗಿದ್ದಾರೆಂಬ ಕಾರಣ ಮಾತ್ರದಿಂದಲೇ ಅವುಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ತೈಲ ಆಯ್ಕೆ ಮಂಡಳಿಗಳ ಸದಸ್ಯರಿಗೆ ಮತ್ತು ಅದರ ಅಧ್ಯಕ್ಷರುಗಳ ಸಂಬಂಧಿಕರುಗಳಿಗೆ ಹಂಚಿಕೆಯಾಗಿದ್ದರೆ ಅವರ ಪ್ರಭಾವ ಮತ್ತು ಅವರು ತಮ್ಮ ಪರವಾಗಿಯೇ ಮಾಡಿಕೊಂಡಿರುವುದು ಕಂಡುಬರುತ್ತದೆ. ಇದಕ್ಕೆ ಸಂಬಂಧಪಟ್ಟ ಇಲಾಖೆಯ ಕಾರ್ಯ ನಿರ್ವಾಹಕ ಮುಖ್ಯಸ್ಥರಾಗಿರುವ ಮಂತ್ರಿಯೂ, ಸಾರ್ವಜನಿಕರ ಸ್ವತ್ತುಗಳೊಂದಿಗೆ ವ್ಯವಹರಿಸುವಾಗ ಪ್ಲಾಟ್‌ಗಳು, ಮನೆಗಳು, ಪೆಟ್ರೋಲ್ ಪಂಪ್‌ಗಳು, ಗ್ಯಾಸ್ ಏಜೆನ್ಸಿ, ಖನಿಜ ಗುತ್ತಿಗೆಗಳು, ಕರಾರುಗಳು, ಕೋಟಾಗಳು ಮತ್ತು ಲೈಸೆನ್ಸ್ ಮುಂತಾದ ರಾಜ್ಯ ಕ್ಷೇಮಾಭಿವೃದ್ಧಿಯಲ್ಲಿ ಉದಾರವಾಗಿ ಫಲಾನುಭವವನ್ನು ಹಂಚಿಕೆ ಮಾಡುವಾಗ ನ್ಯಾಯಯುತವಾಗಿ ಮತ್ತು ನಿಷ್ಪಕ್ಷಪಾತ ವಿಧಾನದಲ್ಲಿ ಇಲಾಖೆಯ ಮುಖ್ಯಸ್ಥರಾಗಿರುವ ಸಚಿವರು ಪರಿವೀಕ್ಷಿಸಬೇಕಾಗುತ್ತದೆ. ಮಂತ್ರಿಗಳು ಜನರ ವಿಶ್ವಾಸಕ್ಕಾಗಿ ಇದನ್ನೆಲ್ಲ ಮಾಡಬೇಕಾಗುತ್ತದೆ. ಜನರು ತನ್ನ ಮೇಲೆ ಇಟ್ಟ ವಿಶ್ವಾಸವನ್ನು ಉಲ್ಲಂಘಿಸುವಂತಹ ಯಾವುದೇ ಕೃತ್ಯವನ್ನು ಮಂತ್ರಿಯೂ ಮಾಡಕೂಡದು".*

19. ಮುಂದುವರೆದು ಮಾನ್ಯ ನ್ಯಾಯವಾದಿಗಳು ***ಅಖಿಲ ಭಾರತ ಎಲ್‌ಪಿಜಿ ವಿತರಕರುಗಳು*** (ಮೇಲಿನ) ಮೊಕದ್ದಮೆಯಲ್ಲಿನ ಅಭಿಪ್ರಾಯೋಕ್ತಿಯನ್ನು ಆಧಾರವಾಗಿ ಉಲ್ಲೇಖಿಸಿರುವರು ಅದು ಈ ಮುಂದಿನಂತಿದೆ:

> "14, . . . . . ಪ್ರಸ್ತುತ ಮೊಕದ್ದಮೆಯಲ್ಲಿ, ಎಲ್‌ಪಿಜಿ ವಲಯಕ್ಕಾಗಿ "ವಿಷನ್ 2015"ರಲ್ಲಿರುವಂತೆ ದೇಶದ ಶೇ.75ರಷ್ಟು ಜನಸಂಖ್ಯೆಯನ್ನು ಒಳಗೊಳ್ಳುವಂತೆ ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಅದರ ಭಾಗವಾಗಿ ಒಳಗೊಳ್ಳುವ ಪ್ರದೇಶಕ್ಕೆ 2015ರಲ್ಲಿ ಹೊಸದಾದ 5.5 ಕೋಟಿ ಸಂಪರ್ಕವನ್ನು ಒಟ್ಟಾರೆಯಾಗಿ ಹೆಚ್ಚಿಸುವುದಕ್ಕೆ ತೈಲ ಮಾರುಕಟ್ಟೆ ಕಂಪನಿಗಳಾದ (ಒಎಂಸಿ) ಸಾರ್ವಜನಿಕ ಉದ್ಯಮಕ್ಕೆ ಗುರಿಯನ್ನು ನೀಡಲಾಗಿದೆ. 2ನೇ ಸಂಖ್ಯೆಯ ಪ್ರತ್ಯರ್ಜಿದಾರರು ದಾಖಲಿಸಿದ ಲಿಖಿತ ವಿವರಣೆ ಪಟ್ಟಿಯ ಪ್ರಕಾರದಂತೆ 2009ನೇ ಸಾಲಿನ ವರ್ಷದಲ್ಲಿ ಆರ್‌ಜಿಜಿಎಲ್‌ವಿ ಕಾರ್ಯಯೋಜನೆಯನ್ನು ಪ್ರಾರಂಭಿಸಲಾಗಿದೆ. ಈ ಕಾರ್ಯ ಯೋಜನೆಯ ಅಡಿಯಲ್ಲಿ ಒಟ್ಟು 6713 ಎಲ್‌ಪಿಜಿ ವಿತರಕತ್ವಕ್ಕಾಗಿ ಜಾಹೀರಾತು ನೀಡಲಾಗಿರುತ್ತದೆ. ಅದರಲ್ಲಿ ಈಗಾಗಲೇ ಸುಮಾರು 2341 ಎಲ್‌ಪಿಜಿ ವಿತರಕರನ್ನು ನಿಯೋಜಿಸಲಾಗಿದೆ. ಮೇಲಿನ ಅಂಕಿಗಳಿಗೆ ಹೆಚ್ಚಿಗೆಯಾಗಿ, ಕಾರ್ಯ ಯೋಜನೆಯು ದಿನಾಂಕ: 01.07.2013ರ ವರೆಗೆ ಈ ವಿತರಕತ್ವದಾರರಲ್ಲಿ ಗಂಡ/ಹೆಂಡತಿಯರ ಕಡ್ಡಾಯ ಪಾಲುದಾರಿಕೆ ಮುಖಾಂತರ 38.8 ಲಕ್ಷ ಎಲ್‌ಪಿಜಿ ಗ್ರಾಹಕರಲ್ಲಿ 1.42 ಲಕ್ಷ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳು ಒಳಗೊಂಡಂತೆ ಬಡವರ ಪರವಾದ ಸ್ವರೂಪವನ್ನು ಹೊಂದಿರುವ ಈ ಯೋಜನೆಯಲ್ಲಿ ಬಿಪಿಎಲ್ ಕುಟುಂಬಗಳಿಗೆ ಎಲ್‌ಪಿಜಿ ಸಂಪರ್ಕವನ್ನು ಬಿಡುಗಡೆ ಮಾಡುವುದಕ್ಕೆ ತೈಲ ಮಾರುಕಟ್ಟೆ ಕಂಪನಿಗಳ ಸಿಎಸ್‌ಆರ್ ನಿಧಿಗಳಿಂದ ಭದ್ರತಾ

> ಠೇವಣಿಯ ಹಣವನ್ನು ನೀಡುವುದಕ್ಕೆ ಸ್ಥಳೀಯ (ಪಂಚಾಯಿತಿ) ನಿವಾಸಿಗಳಿಗೆ, ಮಹಿಳಾ ಸಬಲೀಕರಣಕ್ಕೆ ವಿತರಕತ್ವವನ್ನು ಹಂಚಿಕೆಯನ್ನು ಮಾಡಲಾಗಿದೆ.
>
> ಮೇಲೆ ಮಾಡಿದ ಚರ್ಚೆಯ ಹಿನ್ನೆಲೆಯಲ್ಲಿ ಮತ್ತು ಘನವೆತ್ತ ಸರ್ವೋಚ್ಚ ನ್ಯಾಯಾಲಯವು, ಈ ನ್ಯಾಯಾಲಯವು ಮಂಡಿಸಿದ ಕಾನೂನಿನಲ್ಲಿ ನೋಡಿದಾಗ ಪ್ರಧಾನವಾಗಿ ಸಾರ್ವಜನಿಕ ಹಿತಾಸಕ್ತಿಯನ್ನು ಗಮನಕ್ಕೆ ತಂದುಕೊಂಡು ಆರ್‌ಜಿಜಿಎಲ್‌ವಿ ಕಾರ್ಯ ಯೋಜನೆಯನ್ನು ಪ್ರಾರಂಭಿಸಲಾಗಿದೆ ಎಂಬುದು ಮನದಟ್ಟಾಗುತ್ತದೆ".

20. ಮಾನ್ಯ ನ್ಯಾಯವಾದಿಗಳು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳ ಮಂತ್ರಾಲಯವು ಪ್ರಕಟಿಸಿದ ಕೆಲವು ಪ್ರಕಟಣೆಗಳನ್ನು ಸಹ ಉಲ್ಲೇಖಿಸಿರುವರು. ಅದರಲ್ಲಿ, ಅದರ ಸಂಬಂಧವಾಗಿ ಸರಬರಾಜು ಸರಣಿ ವ್ಯವಸ್ಥೆಯೊಂದಿಗೆ ಗ್ರಾಮೀಣ ಮಹಿಳೆಯರಿಗಾಗಿ ಉದ್ಯೋಗ ಮತ್ತು ಗ್ರಾಮೀಣ ಉದ್ಯೋಗದ ಅವಕಾಶಗಳನ್ನು ಸೃಜಿಸುವುದಕ್ಕೂ ಸಹ ಹಣಕಾಸು ಸ್ವಾತಂತ್ರಕ್ಕಾಗಿ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಅಂಥ ವಿತರಕತ್ವವನ್ನು ನೀಡುವಂತಹ ಪರಿಕಲ್ಪನೆಯನ್ನು ಹೇಳಿರುವಂತಹ ಪ್ರಕಟಣೆಯನ್ನು ಮಂಡಿಸಿರುವರು.

21. ಮೇಲೆ ಉಲ್ಲೇಖಿಸಿದ ನಿರ್ಣಯಗಳಲ್ಲಿ ಸರ್ವೋಚ್ಚ ನ್ಯಾಯಾಲಯ ಮತ್ತು ಪಂಜಾಬ್ ಮತ್ತು ಹರಿಯಾಣ ನ್ಯಾಯಾಲಯವು ಮಾಡಿದ ಅಭಿಪ್ರಾಯೋಕ್ತಿಗಳಲ್ಲಿ, ಹಾಗೆಯೇ ಆರೋಪಗಳಿಗೆ ಕೇಂದ್ರ ಸರ್ಕಾರವು ಪ್ರಕಟಣೆಗಳಲ್ಲಿ ಮಾಡಿದ ಇತರ ಅಭಿಪ್ರಾಯೋಕ್ತಿಗಳಲ್ಲಿ, ಸಹ, ಅರ್ಜಿದಾರರ ಪರವಾಗಿ ಒತ್ತಿ ಹೇಳಲಾದ ಅಂಶಗಳಾದ ಎಲ್‌ಪಿಜಿ ವಿತರಕತ್ವ ಹಂಚಿಕೆಯನ್ನು ಬಡತನ ನಿರ್ಮೂಲನೆ ಮತ್ತು

ಅಭಿವೃದ್ಧಿಯಾತ್ಮಕ ಕಾರ್ಯ ಯೋಜನೆಯಂತೆ ಪರಿಗಣಿಸಬೇಕಾದಂತಹ ಯಾವುವೇ ಪ್ರಸ್ತಾವನೆಗಳು ನಮಗೆ ಕಂಡುಬರುವುದಿಲ್ಲ.

22. ಸ್ತುತ್ಯರ್ಹ ಧ್ಯೇಯೋದ್ದೇಶಗಳಲ್ಲಿ ಮಹಿಳಾ ಸಬಲೀಕರಣ, ಗ್ರಾಮೀಣ ಉದ್ಯೋಗವಕಾಶ ಸೃಜನೆಗಳಂತಹ ಅಂಶಗಳು ಒಳಗೊಂಡಿದ್ದರೂ ಮತ್ತು ಪ್ರಧಾನವಾಗಿ ಸಾರ್ವಜನಿಕ ಹಿತಾಸಕ್ತಿಯನ್ನು ಮನಸ್ಸಿನಲ್ಲಿಟ್ಟುಕೊಂಡ ಕ್ಷೇಮಾಭಿವೃದ್ಧಿ ಕ್ರಮಗಳಾಗಿ ಎಲ್‌ಪಿಜಿ ಹೊಂದಿರುವ ಜನಸಂಖ್ಯೆಯ್ನು ಹೆಚ್ಚಿಸಲು ಕ್ರಮ ತೆಗೆದುಕೊಂಡಿರುವುದನ್ನು ಈ ಕಾರ್ಯಾಯೋಜನೆಯಲ್ಲಿ "ಬಡತನ ನಿರ್ಮೂಲನೆ" ಯಾಗಿ ಎಲ್‌ಪಿಜಿ ವಿತರಕತ್ವವನ್ನು ನೀಡುವುದನ್ನು ಪರಿಗಣಿಸುವುದಕ್ಕೆ ಬಹಳ ಕಷ್ಟಕರವಾಗಿದೆ.

23. ಎಲ್‌ಪಿಜಿ ವಿತರಕತ್ವವು ಸರಬರಾಜು ಸರಣಿಯ ವಿಧಾನವಾಗಿರುವುದರಲ್ಲಿ ಯಾವುದೇ ಸಂದೇಹವಿಲ್ಲ. ಅದೊಂದು ಕ್ಷೇಮಾಭಿವೃದ್ಧಿಯ ಕ್ರಮವಾಗಿದೆ. ಇಲ್ಲಿ ಎಲ್‌ಪಿಜಿ ವಿತರಕತ್ವವು ಒಂದು ಕಡೆ ಉದ್ಯೋಗ ಮತ್ತು ಗಳಿಕೆಯ ಅವಕಾಶವನ್ನು ಸೃಜಿಸುತ್ತಿದೆ ಅದೇ ಸಮಯದಲ್ಲಿ (ಬಿಪಿಎಲ್) "ಬಡತನ ರೇಖೆಗಿಂತ ಕೆಳಗಿರುವ" ಕುಟುಂಬಗಳಿಗೆ ದ್ರವೀಕೃತ ಪೆಟ್ರೋಲಿಯಂ ಅನಿಲವೂ (ಎಲ್‌ಪಿಜಿ) ದೊರೆಯುತ್ತಿದೆ. ಅದಾಗ್ಯೂ ಅಂಥ ವಿತರಕತ್ವದ ನೀಡಿಕೆಯಲ್ಲಿ ಬಡತನ ನಿರ್ಮೂಲನಾ ಅಂಶಗಳೇನಾದರೂ ಇದ್ದರೆ ಅವು ಗ್ರಾಹಕರಿಗೆ ಮಾತ್ರವೇ ಅನ್ವಯವಾಗುತ್ತವೆಯೇ ಹೊರತು ವಿತರಕರಿಗೆ ಅದು ಅನ್ವಯವಾಗುವುದಿಲ್ಲ.

24. ವಸ್ತು ವಿಷಯವನ್ನು ಸಮಗ್ರವಾಗಿ ಅವಲೋಕಿಸಿದಾಗ, ನಮಗೆ ಎಲ್‌ಪಿಜಿ ವಿತರಕತ್ವವು ಅವಶ್ಯಕವಾಗಿ ವಾಣಿಜ್ಯ ಕರಾರಿನ ವಸ್ತು ವಿಷಯವಾಗಿರುವುದು ಮನದಟ್ಟಾಗಿದೆ. ಅದು ಸಮಾಜದಲ್ಲಿ ನಾನಾ ವಿಧದ ಸಬಲೀಕರಣಕ್ಕೆ ಮತ್ತು ಸಮಗ್ರ ಅಭಿವೃದ್ಧಿಯನ್ನು ಮುನ್ನೆಡೆಸುವುದಕ್ಕೆ ಇರುವ ಕ್ಷೇಮಾಭಿವೃದ್ಧಿಯ

ಮಾನದಂಡವು ಇದಾಗಿದೆ ಎಂದು ಇದನ್ನು ಬಡತನ ನಿರ್ಮೂಲನೆ ಮತ್ತು ಅಭಿವೃದ್ಧಿಗಾಗಿ ಅಧಿಸೂಚಿತವಾದ ಯೋಜನೆಯಾಗಿದೆ ಎಂದು ನಿರ್ಬಂಧಿಸಲು ಸಾಧ್ಯವಿಲ್ಲ. ಮೊಕದ್ದಮೆಗೆ ಅಧಿನಿಯಮದ 37ನೇ ಪ್ರಕರಣವನ್ನು ಅನ್ವಯಿಸುವುದಕ್ಕೆ ಸಾಧ್ಯವಿಲ್ಲ. ಈ ಸಂಬಂಧದಲ್ಲಿ, ಯಾವುದೇ ಯೋಜನೆ ಬಡತನ ನಿರ್ಮೂಲನೆಗಾಗಿ ಅವಶ್ಯಕವಾಗಿರುವ ವಿವಿಧ ಸಮಸ್ಯೆಗಳನ್ನು ಮುಕ್ತಗೊಳಿಸುತ್ತದೆ; ಮತ್ತು ಕಾರ್ಯ ಯೋಜನೆ ಬಡತನ ನಿರ್ಮೂಲನೆಗಾಗಿ ಅಗತ್ಯವಿರುವ ವ್ಯಕ್ತಿಗಳಿಗೆ ಲಭ್ಯವಾಗುವಂತೆ ಮಾಡಲು ಮೂಲಭೂತ ಅವಶ್ಯಕತೆಗಳನ್ನು ಸಮುಚಿತವಾಗಿ ಮತ್ತು ಅನುಕೂಲಕರವಾಗಿ ಸುಧಾರಣೆಗೊಳಿಸುವುದಕ್ಕಾಗಿ ಬದಲಾವಣೆಗಳನ್ನು ತರಲು ಮುಂದಾಗುತ್ತವೆ. ಆದರೆ ನಮ್ಮ ಅಭಿಪ್ರಾಯದಲ್ಲಿ, ಎಲ್‌ಪಿಜಿ ವಿತರಕತ್ವ ನೀಡಿಕೆಯೂ ಒಂದು ವಾಣಿಜ್ಯ ಕರಾರು ಆಗಿದೆ ಅದರಲ್ಲಿ ಅಂಥ ವಾಣಿಜ್ಯ ಪರಿಕಲ್ಪನೆಯ ಸಾಮಾನ್ಯ ವ್ಯಾಪ್ತಿಯನ್ನು ಒಳಗೊಂಡಿದೆ ಎಂಬುದು ನಮ್ಮ ಅಭಿಪ್ರಾಯವಾಗಿದೆ. ಅನಗತ್ಯವಾಗಿ ಬಡತನ ನಿರ್ಮೂಲನೆಯೊಂದಿಗೆ ಬಡತನ ರೇಖೆಗಿಂತ ಕೆಳಗಿರುವ ವ್ಯಕ್ತಿಗಳಿಗೆ ಲಭ್ಯವಿರುವ ಎಲ್‌ಪಿಜಿಯನ್ನು ಸಹ ಸಂಬಂಧಿಸಿ ಒತ್ತಿ ಹೇಳಲಾಗಿದೆ. ಆದರೆ ಬಡತನ ನಿರ್ಮೂಲನೆಯೂ ಗ್ರಾಹಕರಿಗೆ ಸಂಬಂಧಿಸಿದ ವಸ್ತು ವಿಷಯವಾಗಿದೆ ಮತ್ತು ವಿತರಕರಿಗೆ ಸಂಬಂಧಿಸಿದ ವಸ್ತು ವಿಷಯುವಾಗಿರುವುದಿಲ್ಲ. ಕ್ಷೇಮಾಭಿವೃದ್ಧಿಯನ್ನು ವಿಸ್ತರಿಸುವುದಕ್ಕೆ ವಿತರಕತ್ವವನ್ನು ಪಡೆಯುವ ಕುರಿತು ಏನೇ ಅಭಿಪ್ರಾಯ ಇದ್ದರೂ ಸಹ ಮತ್ತು ಆದಾಗ್ಯೂ, ಅಂಗವಿಕಲ ವ್ಯಕ್ತಿಗಳಿಗಾಗಿ ವಾಸ್ತವವಾಗಿ ಶೇ.3 ರಷ್ಟು ಮೀಸಲಾತಿಯನ್ನು ಒದಗಿಸಲಾಗಿದೆ. ಆದರೆ 2016ನೇ ಅಧಿನಿಯಮದ 37ನೇ ಪ್ರಕರಣದೊಂದಿಗೆ ಅಂಥ ಮೀಸಲಾತಿಯನ್ನು ಸಹ ಸಂಬಂಧಿಸುವುದಕ್ಕೆ ಕ್ಲಿಷ್ಟಕರವಾಗಿರುತ್ತದೆ. ಪ್ರತ್ಯರ್ಜಿದಾರ ತೈಲ ಕಂಪನಿಗಳು ಮೀಸಲಾತಿಗಾಗಿ ಉಪಬಂಧ ಯಾರೇ ಏಜೆನ್ಸಿಗಳ ಮತ್ತು ಸರ್ಕಾರದ ಯಾವುದೇ ಲಿಖಿತ ಪತ್ರಗಳಲ್ಲಿ ವಿವಿಧ ವರ್ಗಗಳ ಮತ್ತು ಪ್ರವರ್ಗಗಳಿಗೆ ಸೇರಿದ ವ್ಯಕ್ತಿಗಳ ಅಗತ್ಯತೆಗೆ ಮೇಲ್ನೋಟದಲ್ಲಿ ತಮ್ಮ ಗಮನವನ್ನು ಸೆಳೆಯುತ್ತದೆ. ಆದಾಗ್ಯೂ, ಈ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ನಮಗೆ ಎಲ್‌ಪಿಜಿ ವಿತರಕತ್ವವನ್ನು

ಪಡೆಯುವಲ್ಲಿ 37ನೇ ಪ್ರಕರಣವನ್ನು ಅನ್ವಯಿಸುವ ಮೂಲಕ ಅಂಗವಿಕಲ ವ್ಯಕ್ತಿಗಳಿಗಾಗಿ ಹೆಚ್ಚುವರಿ ಮೀಸಲಾತಿಯನ್ನು ಒದಗಿಸುವುದಕ್ಕೆ ನ್ಯಾಯಿಕ ಪರಮಾದೇಶವನ್ನು ಜಾರಿ ಮಾಡುವುದಕ್ಕೆ ಯಾವುದೇ ಸಮರ್ಥ ಕಾರಣಗಳು ಕಂಡು ಬಂದಿಲ್ಲ.

25. ಪ್ರತ್ಯರ್ಜಿದಾರ ಸಂಖ್ಯೆ 1 ರಿಂದ 3ರ ವರೆಗಿನ ರಾಜ್ಯ ಒಡೆತನದ ಮೂರು ತೈಲ ಕಂಪನಿಗಳೂ ಅವಶ್ಯಕವಾಗಿ ಎಲ್‌ಪಿಜಿ ವಿತರಕತ್ವ ಪಡೆದುಕೊಂಡಿರುವುದೂ ಸಹ ಗಮನಾರ್ಹವಾಗಿದೆ ಮತ್ತು ಅಂಥ ಪಡೆದುಕೊಂಡ ವಿತರಕತ್ವವು ಸಮುಚಿತ ಸರ್ಕಾರದ ಅಥವಾ ಸ್ಥಳೀಯ ಪ್ರಾಧಿಕಾರಗಳ, ಬಡತನ ನಿರ್ಮೂಲನೆ ಮತ್ತು ಅಭಿವೃದ್ಧಿ ಕಾರ್ಯ ಯೋಜನೆಯಲ್ಲಿ ವರ್ಗೀಕರಣಗೊಂಡಂತೆ ಯಾವುದೇ ಅಧಿಸೂಚಿತ ಕಾರ್ಯ ಯೋಜನೆಯಾಗಿರುವುದಿಲ್ಲ.

26. ಮೇಲೆ ಹೇಳಲಾದ ವಸ್ತುವಿಷಯವನ್ನು ಅವಲೋಕಿಸಿದಾಗ, ನಮಗೆ ಪ್ರಶ್ನಿತ ಅಧಿಸೂಚನೆ ದಿನಾಂಕ: 17.08.2017ರ ಅಡಿಯಲ್ಲಿ ವಿತರಕತ್ವವನ್ನು ನೀಡುವುದಕ್ಕೆ 2016 ಅಧಿನಿಯಮದ 37ನೇ ಪ್ರಕರಣದ ಅನ್ವಯತೆ ಬಗೆಗೆ ಅರ್ಜಿದಾರರ ಪರವಾಗಿ ಮಾಡಲಾದ ನಿವೇದನೆಗಳು ಸಮರ್ಥವಾಗಿಲ್ಲ ಎಂದು ಕಂಡು ಬರುತ್ತದೆ.

27. ನಿವೇದನೆಗಳ ಕಾಲಾವಧಿಯಲ್ಲಿ, ಅರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಮಂಡಿಸಿದ ಶೇ.5ರಷ್ಟು ಮೀಸಲಾತಿಯನ್ನು ಒದಗಿಸಿಲ್ಲವೆಂಬ ವಿಷಯಕ್ಕೆ ಸಂಬಂಧಪಟ್ಟಂತೆ, ಪ್ರತ್ಯರ್ಜಿದಾರರು ಅಂಗವಿಕಲ ವ್ಯಕ್ತಿಗಳಿಗೆ ಕೇವಲ 6 ಸ್ಥಾನಗಳು ಮಾತ್ರ ಒದಗಿಸಿರುವುದು ಕಾನೂನು ಬಾಹಿರವಾಗಿದೆ. 238 ಸ್ಥಳಗಳಲ್ಲಿ ಶೇ.3 ರಷ್ಟು ಮೀಸಲಾತಿಯನ್ನು ಲೆಕ್ಕ ಹಾಕಿದರೆ ಅದು 7 ಸ್ಥಾನಗಳನ್ನು ಮೀಸಲಾಗಿಡಬೇಕಾಗಿತ್ತು. ಆದರೆ 6 ಸ್ಥಾನಗಳು ಮಾತ್ರ ಮೀಸಲಾಗಿಟ್ಟಿರುವುದು ಪ್ರತ್ಯರ್ಜಿದಾರರ ಕಾನೂನು ಬಾಹಿರ ಕೃತ್ಯವಾಗಿದೆ ಎಂದು ನಿವೇದಿಸಿರುವರು. ಈ

ಸಂಬಂಧದಲ್ಲಿ ಪ್ರತ್ಯರ್ಜಿದಾರರ ಪರವಾಗಿ ಮಾನ್ಯ ನ್ಯಾಯವಾದಿಗಳು ಒಟ್ಟು 238 ವಿತರಕತ್ವದಲ್ಲಿ 31 ವಿತರಕತ್ವವನ್ನು "ದುರ್ಗಮ ಕ್ಷೇತ್ರಿಯ ವಿತರಕ" ಎಂದು ಗುರುತಿಸಲಾಗಿದೆ. ಈ 31 ಕ್ಷೇತ್ರಗಳನ್ನು ಅಂಗವಿಕಲ ವ್ಯಕ್ತಿಗಳಿಗೆ ಯುಕ್ತವಾಗಿರುವುದಿಲ್ಲ; 238 ಕ್ಷೇತ್ರಗಳಲ್ಲಿ 31 ಕ್ಷೇತ್ರಗಳನ್ನು ತೆಗೆದು ಹಾಕಿ ಉಳಿದ ಒಟ್ಟು ಕ್ಷೇತ್ರಗಳಲ್ಲಿ ಶೇ.3ರಷ್ಟು ಮೀಸಲಾತಿಯನ್ನು ಒದಗಿಸಿದಾಗ, ಅದು 6 ಕ್ಷೇತ್ರವಾಗುತ್ತದೆ. ಈ ಸಂಬಂಧದಲ್ಲಿ ನಮಗೆ ಪ್ರತ್ಯರ್ಜಿದಾರರಿಂದ ಯಾವುದೇ ದೋಷ ಅಥವಾ ಕಾನೂನುಬಾಹಿರ ಕೃತ್ಯ ಎಸಗಿರುವುದು ಕಂಡು ಬಂದಿಲ್ಲ; ಮತ್ತು ಈ ವಸ್ತುವಿಷಯದಲ್ಲಿ ಏಕೀಕೃತ ಮಾರ್ಗಸೂಚಿಯನ್ನು ಯುಕ್ತವಾಗಿ ಅನ್ವಯವಾಗುತ್ತದೆ ಎಂದು ಕಂಡು ಬರುತ್ತದೆ.

28. ನಾವು ಎಲ್‌ಪಿಜಿ ವಿತರಕರುಗಳ ಆಯ್ಕೆಗಾಗಿ ಏಕೀಕೃತ ಮಾರ್ಗಸೂಚಿಗಳ ಅಡಿಯಲ್ಲಿ ವಿತರಕತ್ವವನ್ನು ನೀಡಿಕೆಯಲ್ಲಿ ಶೇ.3ರಷ್ಟು ಮೀಸಲಾತಿಯನ್ನು ಉಪಬಂಧಿಸಿರುವುದನ್ನು ಪರಿವೀಕ್ಷಿಸಿದ್ದೇವೆ ಮತ್ತು ಎಲ್‌ಪಿಜಿ ವಿತರಕತ್ವ ನೀಡಿಕೆಗೆ ಸಂಬಂಧಿಸಿದಂತೆ ಕಾನೂನಿನ ಚೌಕಟ್ಟಿನೊಳಗೆ ಯುಕ್ತ ಮತ್ತು ಅರ್ಹವೆಂದು ಭಾವಿಸಿದಂಥ ಮೀಸಲಾತಿಯನ್ನು ಒದಗಿಸುವುದಕ್ಕೆ ಹೊಂದಿರುವ ಹಕ್ಕನ್ನು ಮೊಟಕುಗೊಳಿಸಲು ತೆಗೆದುಕೊಳ್ಳುವ ಅಭಿಪ್ರಾಯೋಕ್ತಿಗಳು ಇರುವುದಿಲ್ಲ. ಈ ವಸ್ತುವಿಷಯದಲ್ಲಿ ಪರಿಗಣಿಸಬಹುದಾದ ಪ್ರಶ್ನೆಯು 2016 ಅಧಿನಿಯಮದ 37ನೇ ಪ್ರಕರಣದ ಅನ್ವಯಕವು ಸೀಮಿತವಾದುದಾಗಿದೆ ಮತ್ತು ಇಲ್ಲಿ 37ನೇ ಪ್ರಕರಣವನ್ನು ಉಲ್ಲಂಘಿಸಿರುವುದಿಲ್ಲ.

29. 37ನೇ ಪ್ರಕರಣದ ಅನ್ವಯಕದ ಸಂಬಂಧದಲ್ಲಿ ವಾದಾಂಶವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲದಿರುವಾಗಲೆ, ನಾವು ಇಲ್ಲಿ ಅರ್ಜಿದಾರರು ಅರ್ಜಿ ಶುಲ್ಕ ಮತ್ತು ಹಣಕಾಸು ನೆರವಿಗೆ ಸಂಬಂಧಪಟ್ಟಂತೆ ಕೋರಿದ ರಿಯಾಯಿತಿ ಬಗ್ಗೆ ಇತರ ಕ್ಲೇಮುಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಯಾವುದೇ ಬಾಧಿತ

ವ್ಯಕ್ತಿಯು ಸೂಕ್ತವಾದ ಪ್ರಾಧಿಕಾರವನ್ನು ಕೋರಲು ಅರ್ಜಿದಾರರು ಮುಕ್ತವಾಗಿರುತ್ತಾರೆ. ಹಾಗೆ ಪರಿಗಣನೆಗಾಗಿ ಅರ್ಜಿದಾರರು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಯುಕ್ತವಾದ ನಿವೇದನೆಯನ್ನು ಸಲ್ಲಿಸಿರುವುದನ್ನು ಯುಕ್ತ ಪ್ರಾಧಿಕಾರಿಗಳು ಪರಿಶೀಲಿಸಬಹುದು ಮತ್ತು ಕಾನೂನಿಗನುಸಾರವಾಗಿ ಅದರ ಮೇಲಿನ ನಿರ್ಣಯವನ್ನು ತೆಗೆದುಕೊಳ್ಳಲು ಮುಕ್ತವಾಗಿರುತ್ತದೆ ಎಂದು ಸ್ಪಷ್ಟವಾದ ಅಭಿಪ್ರಾಯೋಕ್ತಿಯನ್ನು ವ್ಯಕ್ತಪಡಿಸುತ್ತೇವೆ.

30. ಮೇಲಿನ ಅಭಿಪ್ರಾಯೋಕ್ತಿಯೊಂದಿಗೆ, ಈ ಅರ್ಜಿಯನ್ನು ವಿಲೇ ಮಾಡಲಾಗಿದೆ.

31. ದಿನಾಂಕ: 09.02.2018ರ ಮಧ್ಯಂತರ ಆದೇಶವನ್ನು ತೆರವುಗೊಳಿಸಲಾಗಿದೆ.